# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎ : 0816-2255650, 2273511 ಫ್ಯಾಕ್ಸ್ :0816-2270719

ಸಂಖ್ಯೆ:ತುವಿ: ಪ.ವಿ:ವಿ.ನಿ. 04:ಬಿ.ಇಡಿ.:ಪ.ಶುಲ್ಕ.:2018-19 : ದಿನಾಂಕ: 06.12.2018

## ಅಧಿಸೂಚನೆ

ವಿಷಯ: 2017-18 ನೇ ಶೈಕ್ಷಣಿಕ ಸಾಲಿನ ಜನವರಿ /ಫೆಬ್ರವರಿ - 2019 ರ ಮಾಹೆಗಳಲ್ಲಿ ನಡೆಯುವ ಸ್ನಾತಕ ಶಿಕ್ಷಣ (B.Ed.) ಪದವಿ (CBCS ಪಠ್ಯಕ್ರಮದನುದಾರ) 2015-16 ನೇ ಶೈಕ್ಷಣಿಕ ಸಾಲಿನಿಂದ ಇಲ್ಲಿಯವರೆಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ದ್ವಿತೀಯ & ನಾಲ್ಕನೇ (ನವೀನ & ಪೂರಕ) ಸೆಮಿಸ್ಟರ್‌ಗಳ ಪರೀಕ್ಷಾ ಶುಲ್ಕ ಪಾವತಿಸಿಕೊಳ್ಳುವ ಕುರಿತು.

ಉಲ್ಲೇಖ : 1. ಕ.ಸ. ತಿದ್ದುಪಡಿ ಮತ್ತು ಸೇರ್ಪಡೆ ಆದೇಶ ಸಂಖ್ಯೆ : ಹಿಂವಕ 589 ಬಿಎಂಎಸ್ 2013 ದಿನಾಂಕ: 06.08.2014

2. ಕ.ಸ. ಆದೇಶ ಸಂಖ್ಯೆ : ಹಿಂವಕ 589 ಬಿಎಂಎಸ್ 2013 ದಿನಾಂಕ: 05.10.2013
3. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಕಟಣೆ ಸಂಖ್ಯೆ / ಹಿಂವಕ/ ವಿವೇ/ಸಿಆರ್-34 /2014-15 ದಿನಾಂಕ: 19.09.2014
4. ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 06.12.2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017-18 ನೇ ಶೈಕ್ಷಣಿಕ ಸಾಲಿನ ಜನವರಿ /ಫೆಬ್ರವರಿ - 2019 ರ ಮಾಹೆಗಳಲ್ಲಿ ನಡೆಯುವ ಸ್ನಾತಕ ಶಿಕ್ಷಣ (B.Ed.) ಪದವಿ (CBCS ಪಠ್ಯಕ್ರಮದನುದಾರ) 2015-16 ನೇ ಶೈಕ್ಷಣಿಕ ಸಾಲಿನಿಂದ ಇಲ್ಲಿಯವರೆಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ದ್ವಿತೀಯ & ನಾಲ್ಕನೇ (ನವೀನ & ಪೂರಕ) ಸೆಮಿಸ್ಟರ್‌ಗಳ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

**ಪರೀಕ್ಷೆಗಳಿಗೆ ಹಾಜರಾಗುವ ಅರ್ಹ ವಿದ್ಯಾರ್ಥಿಗಳ ಶುಲ್ಕದ ವಿವರಗಳನ್ನು ವಿಷಯದೊಂದಿಗೆ ಆನ್‌ಲೈನ್‌ನಲ್ಲಿ ನಮೂದಿಸುವುದು. ಆನ್‌ಲೈನ್ ಪರೀಕ್ಷಾ ಅರ್ಜಿಗಳ ಆಧಾರದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಿದ್ದು, ಪ್ರತ್ಯೇಕವಾಗಿ ಪ್ರಶ್ನೆ ಪತ್ರಿಕೆ ಕೋರಿಕೆ ಪಟ್ಟಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಸಂಬಂಧಿಸಿದ ವಿದ್ಯಾರ್ಥಿಗಳು ಶೈಕ್ಷಣಿಕ ವಿಭಾಗದಿಂದ ಪ್ರವೇಶಾನುಮೋದನೆಯಾದ ವಿಷಯಗಳಿಗೆ / ಪತ್ರಿಕೆಗಳಿಗೆ ಕೋಡ್‌ಗಳನ್ನು ಪರಿಶೀಲಿಸಿ ಆನ್‌ಲೈನ್ ಮೂಲಕ ಪರೀಕ್ಷಾ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ವಿಷಯ / ಪತ್ರಿಕೆಗಳ ಕೋಡ್‌ನ್ನು ತಪ್ಪಾಗಿ ನಮೂದಿಸಿದಲ್ಲಿ ಈ ಕಾರಣದಿಂದಾಗಿ ಪ್ರಶ್ನೆ ಪತ್ರಿಕೆಯಲ್ಲಿನ ಸರಬರಾಜು ಮಾಡುವುದರಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದು.**

**ಶುಲ್ಕ ಪಾವತಿಸಲು ವಿವರವಾದ ದಿನಾಂಕಗಳು ಈ ಕೆಳಗಿನಂತಿವೆ.**

| ಕ್ರಮ ಸಂಖ್ಯೆ | ಶುಲ್ಕದ ವಿವರ | ಕೊನೆಯ ದಿನಾಂಕ |
|---|---|---|
| 1. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ | 20.12.2018 |
| 2. | ವಿದ್ಯಾರ್ಥಿಗಳಿಗೆ ರೂ. 100/- ದಂಡ ಶುಲ್ಕದೊಂದಿಗೆ | 26.12.2018 |
| 3. | ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ | 28.12.2018 |
| 4. | ಕಾಲೇಜಿನವರು ವಿಶ್ವವಿದ್ಯಾನಿಲಯದ ಖಾತೆಗೆ ಪಾವತಿಸಲು ಕೊನೆಯ ದಿನಾಂಕ | 31.12.2018 |

(2 ನೇ ಪುಟಕ್ಕೆ)

## :ಪರೀಕ್ಷಾ ಶುಲ್ಕ:

| ಕ್ರ.ಸಂ | ಸೆಮಿಸ್ಟರ್ | ಕೋರ್ಸ್ | ಶುಲ್ಕ |
|---|---|---|---|
| 1. | ದ್ವಿತೀಯ ಮತ್ತು ನಾಲ್ಕನೇ | ಬಿ.ಇಡಿ. | ರೂ. 1000-00 (ನವೀನ) |
| 2. | ದ್ವಿತೀಯ ಮತ್ತು ನಾಲ್ಕನೇ | ಬಿ.ಇಡಿ., | ಒಂದು ವಿಷಯಕ್ಕೆ ರೂ. 100-00 (ಪೂರಕ) |

ಈ ಮೇಲೆ ಸೂಚಿಸಿದ ಪರೀಕ್ಷಾ ಶುಲ್ಕದೊಂದಿಗೆ ಎಲ್ಲಾ ವಿದ್ಯಾರ್ಥಿಗಳು (**ಶುಲ್ಕ ರಿಯಾಯಿತಿ ಪಡೆದ ವಿದ್ಯಾರ್ಥಿಗಳೂ ಸಹ**) ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳಲ್ಲಿ ಅನ್ವಯವಾಗುವ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು.

| ಕ್ರ.ಸಂ | ಇತರೆ ಶುಲ್ಕಗಳ ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಅಂಕಪಟ್ಟಿ ಶುಲ್ಕ( ಪ್ರತಿ ಸೆಮಿಸ್ಟರ್‌ಗೆ) | 150-00 |
| 2. | ಆನ್‌ಲೈನ್ ಅರ್ಜಿ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 25-00 |
| 3. | ಅರ್ಜಿ ಪರಿಶೀಲನಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | 10-00 |
| 4. | ಪರೀಕ್ಷಾ ಸಿದ್ಧತಾ ಶುಲ್ಕ (Process fee) ( ಪ್ರತಿ ಸೆಮಿಸ್ಟರ್‌ಗೆ) | 35-00 |
| 5. | ಪ್ರಾಯೋಗಿಕ ಪರೀಕ್ಷಾ ಶುಲ್ಕ ( ಒಂದು ವಿಷಯಕ್ಕೆ) | 150-00 |
| 6. | ಮೌಖಿಕ ಸಂದರ್ಶನ (Viva ) ( ಒಂದು ವಿಷಯಕ್ಕೆ) | 150-00 |
| 7. | ಪ್ರಾಜೆಕ್ಟ್ ವ್ಯಾಲ್ಯೂವೇಷನ್ ( Project Evaluation ) ( ಒಂದು ವಿಷಯಕ್ಕೆ) | 100-00 |

**ಸಂಬಂಧಿಸಿದ ಶುಲ್ಕವನ್ನು ಮಾತ್ರ ಪಾವತಿಸತಕ್ಕದ್ದು.**

*ಅರ್ಜಿ ಪರಿಶೀಲನಾ ಶುಲ್ಕ **ರೂ.**10-00 ಗಳಲ್ಲಿ ರೂ. 06-00 ಗಳನ್ನು ಪರೀಕ್ಷಾ ಕೇಂದ್ರದಲ್ಲಿ ಉಳಿಸಿಕೊಂಡು ಉಳಿದ ರೂ.04-00 ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವುದು.

*ಆನ್‌ಲೈನ್ ಅರ್ಜಿ ಶುಲ್ಕ **ರೂ.**25-00 ಗಳಲ್ಲಿ ರೂ.05-00ಗಳನ್ನು ಕಾಲೇಜಿನವರು ಉಳಿಸಿಕೊಂಡು ಉಳಿದ ರೂ.20-00 ಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವುದು.

## <u>ಶುಲ್ಕ ವಿನಾಯಿತಿ</u>

1. **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ /ಪ್ರವರ್ಗ– 1 ವಿದ್ಯಾರ್ಥಿಗಳಿಗೆ: (ಪೂರಕ & ನವೀನ)**
   ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ **ರೂ.**2.50 ಲಕ್ಷದೊಳಗಿದ್ದು, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದರೆ ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಅರ್ಹರಿರುತ್ತಾರೆ.
2. **ಪ್ರವರ್ಗ - 2ಎ, 2ಬಿ, 3ಎ, 3ಬಿ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ (ನವೀನ):**
   ಹಿಂದುಳಿದ ವರ್ಗಗಳಾದ 2ಎ, 2ಬಿ (ಅಲ್ಪ ಸಂಖ್ಯಾತ), 3ಎ, 3ಬಿ ಮತ್ತು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಹಾಗೂ ಇತರೇ ಜನಾಂಗದವರು (ಉದಾ: ಬ್ರಾಹ್ಮಣ, ವೈಶ್ಯ ಇತ್ಯಾದಿ) ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ **ರೂ.**1.00 ಲಕ್ಷದೊಳಗಿದ್ದು, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದರೆ ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ.
3. ಎಲ್ಲಾ ಪುನರಾವರ್ತಿತ ವಿದ್ಯಾರ್ಥಿಗಳು (ಸೂಚಿಸಿದ ಆದಾಯ ಮಿತಿಗೊಳಪಟ್ಟು) ನವೀನ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ಪಡೆಯಲು ಅರ್ಹರಿರುತ್ತಾರೆ (ಉದಾ: ನಾಲ್ಕನೇ ಸೆಮಿಸ್ಟರ್‌ನಲ್ಲಿ ನವೀನರಾಗಿದ್ದು ದ್ವಿತೀಯ ಸೆಮಿಸ್ಟರ್‌ನಲ್ಲಿ ಪುನರಾವರ್ತಿತರಾದಲ್ಲಿ(Repeater) ನಾಲ್ಕನೇ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ಪಡೆಯಲು ಅರ್ಹರಿರುತ್ತಾರೆ.

(3 ನೇ ಪುಟಕ್ಕೆ)

4. ಪುನರಾವರ್ತಿತ(Repeaters exam) ಪರೀಕ್ಷೆಗಳಿಗೆ ಶುಲ್ಕ ವಿನಾಯಿತಿ ಪಡೆಯಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಉಳಿದ ವಿದ್ಯಾರ್ಥಿಗಳು ಅರ್ಹರಾಗಿರುವುದಿಲ್ಲ.

ವಿಶ್ವವಿದ್ಯಾನಿಲಯದ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸಲು ಅರ್ಹತೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಸ್ವೀಕರಿಸಲು ಹಾಗೂ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

**ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.**

ವಿಶ್ವವಿದ್ಯಾನಿಲಯದಿಂದ ಅನುಮೋದನೆ ಪಡೆದ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾನಿಲಯದ ಪರವಾಗಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಸಂಗ್ರಹಿಸಿ, ನಂತರ ಒಟ್ಟು ಶುಲ್ಕವನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ನಿಧಿಗೆ **RTGS/NEFT ಮೂಲಕ ಎಸ್.ಬಿ.ಐ. ಖಾತೆ ನಂ. 36954908103 ಗೆ ಪರೀಕ್ಷಾ ಶುಲ್ಕವನ್ನು ದಿನಾಂಕ: 31.12.2018 ರೊಳಗೆ ಪಾವತಿಸಿದ ಮೂಲ ಪ್ರತಿಯನ್ನು ಹಣಕಾಸು ವಿಭಾಗಕ್ಕೆ ಹಾಗೂ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸುವುದು.**

ಹಿಂದಿನ ವರ್ಷಗಳಲ್ಲಿ ಸಲ್ಲಿಸಿರುವ ಮಾದರಿಯಲ್ಲಿಯೇ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಅಲ್ಪಸಂಖ್ಯಾತ/ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಪಾವತಿಸದ ಪರೀಕ್ಷಾ ಶುಲ್ಕವನ್ನು ಮರುಭರಿಕೆಯ ಸಲುವಾಗಿ ಹಣಕಾಸು ವಿವರಗಳ ಪಟ್ಟಿಯನ್ನು ಪ್ರಾಂಶುಪಾಲರು ದೃಢೀಕರಿಸಿದ ಪ್ರತಿಯನ್ನು ನೇರವಾಗಿ **ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರಿಗೆ ಕಳುಹಿಸುವುದು ಹಾಗೂ ಮಾಹಿತಿಯನ್ನು **ಕುಲಸಚಿವರು(ಪರೀಕ್ಷಾಂಗ)** ಇವರಿಗೂ ಈ ಕೆಳಕಂಡ ವಿವರಗಳೊಂದಿಗೆ ಸಲ್ಲಿಸುವುದು.

**ಪರೀಕ್ಷಾ ಶುಲ್ಕದ ಹಣಕಾಸು ಪಟ್ಟಿಯನ್ನು ದ್ವಿಪ್ರತಿಗಳಲ್ಲಿ ತಪ್ಪದೇ ಸಲ್ಲಿಸುವುದು(ಪರೀಕ್ಷಾಂಗ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಒಂದು ಪ್ರತಿ).**

ಪ್ರಾಯೋಗಿಕ (Practical) ಪರೀಕ್ಷೆಗಳನ್ನು ಸೈದ್ಧಾಂತಿಕ (Theory) ಪರೀಕ್ಷೆಗಳಿಗಿಂತ ಮೊದಲು ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಪರೀಕ್ಷಾ ಅಧೀಕ್ಷಕರು ಸಿದ್ಧಪಡಿಸಿ ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸುವುದು ಮತ್ತು ಅದರ ಒಂದು ಪ್ರತಿಯನ್ನು **ಕುಲಸಚಿವರು(ಪರೀಕ್ಷಾಂಗ)** ಇವರಿಗೆ ಸಲ್ಲಿಸುವುದು.

ಸೈದ್ಧಾಂತಿಕ(ಪಠ್ಯ ವಿಷಯ) ಪರೀಕ್ಷೆಗಳ ವಿವರಗಳನ್ನೊಳಗೊಂಡ ವೇಳಾಪಟ್ಟಿಯನ್ನು ಮುಂದೆ ಪ್ರಕಟಿಸಲಾಗುವುದು.

ಆಂತರಿಕ ಅಂಕಗಳ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಮೊದಲು ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ ನಂತರ **ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರಿಗೆ ಸೈದ್ಧಾಂತಕ ಪರೀಕ್ಷೆಗಳು ಪ್ರಾರಂಭವಾಗುವ ಮೊದಲು ಸಲ್ಲಿಸತಕ್ಕದ್ದು. **ಒಂದು ಬಾರಿ ಸಲ್ಲಿಸಿದ ನಂತರ ಯಾವುದೇ ಕಾರಣಕ್ಕೂ ತಿದ್ದುಪಡಿ ಮಾಡುವುದಿಲ್ಲ ಎಂಬ ಅಂಶವನ್ನು ಗಮನಿಸುವುದು.** ವಿಳಂಬವಾದಲ್ಲಿ ದಿನವೊಂದಕ್ಕೆ ರೂ. 1,000/- ಗಳಂತೆ ಗರಿಷ್ಠ

ರೂ.10,000-00 (ಹತ್ತು ದಿನಗಳು) ಗಳ ದಂಡಶುಲ್ಕದೊಂದಿಗೆ ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸುವುದು. ಸೆಮಿಸ್ಟರ್‌ವಾರು ಆಂತರಿಕ ಅಂಕಗಳನ್ನು ಫಲಿತಾಂಶ ಪ್ರಕಟಗೊಂಡ ನಂತರ ಯಾವುದೇ ಕಾರಣಕ್ಕೂ ಅಂಗೀಕರಿಸಲಾಗುವುದಿಲ್ಲ, ಆಗುವ ತಪ್ಪುಗಳಿಗೆ ಪ್ರಾಂಶುಪಾಲರುಗಳೇ ಜವಾಬ್ದಾರರಾಗಿರುತ್ತಾರೆ.

ಎಲ್ಲಾ ಪ್ರಾಂಶುಪಾಲರುಗಳು ಸಹಕರಿಸಬೇಕಾಗಿ ಕೋರಲಾಗಿದೆ.

***ವಿಶೇಷ ಸೂಚನೆ:***

1. ಸಂಬಂಧಪಟ್ಟ ಇಲಾಖೆಗಳಿಂದ 2017-18 ನೇ ಶೈಕ್ಷಣಿಕ ಸಾಲಿನ ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಶುಲ್ಕದ ಮರುಭರಿಕೆ ಹಣ ಬಂದ ತಕ್ಷಣ ವಿಶ್ವವಿದ್ಯಾನಿಲಯದ ಖಾತೆಗೆ ಪಾವತಿಸಿ ಮಾಹಿತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಮತ್ತು ಹಣಕಾಸು ವಿಭಾಗಕ್ಕೆ ಒಂದೊಂದು ಪ್ರತಿಯನ್ನು ಸಲ್ಲಿಸುವುದು. ಸಲ್ಲಿಸದೇ ಕಾಲೇಜಿನಲ್ಲಿಯೇ ಉಳಿಸಿಕೊಂಡಿದ್ದಲ್ಲಿ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.
2. ಪರೀಕ್ಷಾ ಶುಲ್ಕದ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ (ಅನುಬಂಧ-01) ಸೆಮಿಸ್ಟರ್‌ವಾರು ಭರ್ತಿ ಮಾಡಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಆದೇಶದ ಮೇರೆಗೆ

ಕುಲಸಚಿವ(ಪರೀಕ್ಷಾಂಗ)

ಗೆ,

ಪ್ರಾಂಶುಪಾಲರು, ಸಂಯೋಜಿತ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.
4. ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಕುಲಸಚಿವರ ಆಪ್ತ ಕಾರ್ಯಾಲಯ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
9. ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.(ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
11. ಕಛೇರಿ ಪ್ರತಿ.